ಸಾಕ್ಷಿಯನ್ನು ದಿನಾಂಕ: 06.06.2024 ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ ಶ್ರೀ ಕೆ.ಎಸ್.ಬಿ. ವಕೀಲರಿಂದಃ**

ಮುಖ್ಯ ವಿಚಾರಣೆಯ ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿ ಕೊಟ್ಟಿರುತ್ತೇನೆ. ಉದಾಹರಣೆಯಲ್ಲಿ ಏನೇನು ಬರೆಸಿದ್ದೇನೆ ಎಂದು ನನಗೆ ಮಾಹಿತಿ ಇದೆ. ನನ್ನ ಉದಾಹರಣೆಯಲ್ಲಿ ವಾದಿಗೆ ದಾವಾಸ್ತಿಯಲ್ಲಿ ಯಾವುದೇ ಹಕ್ಕು ಇಲ್ಲ ಎಂದು ಬರೆಸಿರುತ್ತೇನೆ. ಉದಾಹರಣೆಯಲ್ಲಿ ದಾವಾಸ್ತಿ ಪ್ರತಿವಾದಿಯ ಒಟ್ಟು ಕುಟುಂಬದ ಆಸ್ತಿ ಅಲ್ಲ ಎಂದು ಬರೆಸಿರುವುದಿಲ್ಲ ಸಾಕ್ಷಿ ಮುಂದುವರಿದು ಅದು ಟ್ರೈಬ್ಯುನಲ್ ಆಸ್ತಿ ಎಂದು ನುಡಿಯುತ್ತಾರೆ. ದಾವಾಸ್ತಿ ವಾದಿ ಕುಟುಂಬಕ್ಕೆ ಯಾವ ವರ್ಷ ಮಂಜೂರಿ ಆಯಿತು ಎಂದು ನಿರ್ದಿಷ್ಟವಾಗಿ ಹೇಳಲು ಆಗುವುದಿಲ್ಲ. ಆ ಬಗ್ಗೆ ದಾಖಲೆಯನ್ನು ಪಡೆದು ನೋಡಿರುತ್ತೇನೆ. ದಾವಾಸ್ತಿಯ ಮೂಲ ರೈತರು ಯಾರಾಗಿದ್ದರು ಎಂದರೆ ಸಾಕ್ಷಿ ರಾಮಚಂದ್ರ ಜಟ್ಟಿ ನಾಯ್ಕ ಆಗಿದ್ದರು ಎಂದು ನುಡಿಯುತ್ತಾರೆ. ಆ ಬಗ್ಗೆ ದಾಖಲೆಯನ್ನು ಪಡೆದುಕೊಂಡಿದ್ದೇನೆ. ಸ್ವದ್ರಿ ಆಸ್ತಿಯನ್ನು ರಾಮಚಂದ್ರ ಜಟ್ಟಿ ನಾಯ್ಕ ಒಬ್ಬರೇ ಸಾಗುವಳಿ ಮಾಡುತ್ತಿದ್ದರು. ರಾಮಚಂದ್ರ ಜಟ್ಟಿ ನಾಯ್ಕರವರು ಒಬ್ಬರೇ ಸಾಗುವಳಿ ಮಾಡುತ್ತಿರುವ ಬಗ್ಗೆ ನನ್ನ ಹತ್ತಿರ ದಾಖಲೆ ಇದೆ. ಈ ವಿಚಾರವನ್ನು ಉದಾಹರಣೆಯಲ್ಲಿ ಬರೆಸಿರುತ್ತೇನೆ.

( ಈ ಸಮಯದಲ್ಲಿ ಸಾಕ್ಷಿ ಸರಿಯಾದ ಉತ್ತರ ನೀಡದೇ ಇದ್ದ ಕಾರಣ ಪಾಟೀ ಸವಾಲನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

ಸಹಿ ಇದೆ/-
ಪ್ರಧಾನ ಸಿವಿಲ್ ನ್ಯಾಯಾಧೀಶರು, ಹೊನ್ನಾವರ.